**Spl.C.(Corruption)/5002/2015**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿ ಡಬ್ಲೂ:** 14

**ಪಿ ಡಬ್ಲೂ:** 10

ಸಾಕ್ಷಿಯ ಹೆಸರು - ಮಂಜುನಾಥ

ತಂದೆಯ ಹೆಸರು - ವಿರುಪಾಕ್ಷಪ್ಪ

ವಯಸ್ಸು - 46 ವರ್ಷ

ಉದ್ಯೋಗ - ಹೋಮ್ ಗಾರ್ಡ

ವಾಸಸ್ಥಳ - ಹೊಸಪೇಟೆ

**ಸಾಕ್ಷಿಯನ್ನು ದಿನಾಂಕ:** 28-03-2026 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ವಿಶೇಷ ಪಿ. ಪಿ. ಅವರಿಂದ**

ಈಗ್ಗೆ **12** ವರ್ಷದ ಹಿಂದೆ ನಾನು ಕಲ್ಲಹಳ್ಳಿಯ ಚೆಕ್ ಪೋಸ್ಟ ನಲ್ಲಿ ಹೋಮ್ ಗಾರ್ಡ ಆಗಿ ಕೆಲಸ ಮಾಡುತ್ತಿದ್ದೆ. ಆರೋಪಿ ಕೂಡಾ ಅರಣ್ಯ ಇಲಾಖೆಯ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದ. ಆರೋಪಿ ಒಂದು ಮೊಬೈಲ್ ನ್ನು **22** ನೇ ತಾರೀಖು ನನ್ನ ಬಳಿ ಇಟ್ಟುಕೊಳ್ಳಲು ಕೊಟ್ಟಿದ್ದ. ಮಾರನೇ ದಿನ ಮಧ್ಯಾಹ್ನ **02.30** ರ ಸುಮಾರಿಗೆ ಆರೋಪಿ ಪೋನ್ ಮಾಡಿ ಮೊಬೈಲ್ ಇರುವಂತೆ ಹೇಳಿದ. ನಾನು ಸಂಜೆ **05.30** ರ ಸುಮಾರಿಗೆ ಮೊಬೈಲ್ ನೊಂದಿಗೆ ಚೆಕ್ ಪೋಸ್ಟ ಗೆ ಹೋಗಿ ಆರೋಪಿ ಸೂಚಿಸಿದ ಮೇರೆಗೆ ಚಾಸಾ **-15** ರವರಿಗೆ ಮೊಬೈಲ್ ಹಸ್ತಾಂತರಿಸಿ ಮನೆಗೆ ಹೋದೆ.

ರಾತ್ರಿ ನಾನು ಕರ್ತವ್ಯಕ್ಕೆ ಹಾಜರಾದಾಗ ಆರೋಪಿ ಲಂಚಕ್ಕೆ ಬೇಡಿಕೆ ಇಟ್ಟು ಲೋಕಾಯುಕ್ತ ಪೋಲಿಸರಿಂದ ಟ್ರಾಪ್ ಆಗಿದ್ದ ವಿಚಾರ ತಿಳಿದು ಬಂತು. ಸಾಕ್ಷಿ ಆರೋಪಿಯನ್ನು ಗುರುತಿಸಿದ್ದಾರೆ. ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಯು ಬಿ ಆರ್., ವಕೀಲರಿಂದ: ಇಲ್ಲಾ.**

ನಾನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಕೆಲಸ ಮಾಡುತ್ತೇನೆ ಅಂದರೆ ಸರಿ. ಆರೋಪಿ ಅರಣ್ಯ ಇಲಾಖಾ ನೌಕರ. ನನ್ನ ಹಾಗೂ ಆರೋಪಿಯ ಕರ್ತವ್ಯ ಗಳಿಗೆ ಸಂಬಂಧವಿಲ್ಲ ಅಂದರೆ ಸರಿ. ನಾನು ದಿನಗೂಲಿ ನೌಕರ. ನಾನು ಹೇಳಿದಂತೆ ಆರೋಪಿ ನನಗೆ ಯಾವುದೇ ಮೊಬೈಲ್ ಕೊಟ್ಟಿರಲಿಲ್ಲ.

ನಾನು ಅದನ್ನು ಹಿಂದಿರುಗಿಸಿಲ್ಲ, ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ವಿಜಯನಗರ ಜಿಲ್ಲೆ, ಹೊಸಪೇಟೆ.